ಸಿ.ಸಿ..ನಂ.11-25

ಪಿ.ಡಬ್ಲ್ಯೂ-1

ದಿನಾಂಕ.13-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಡಿ.ಎನ್ ಎನ್ ವಕೀಲರಿಂದಃ**

1. ನನಗೆ ಬಾತ್ಮಿ ಬಂದ ಸಮಯ ನೆನಪಿಲ್ಲ. ಸದ್ರಿ ಬಾತ್ಮಿ ನನಗೆ ಹೆಬ್ಬುಳದಲ್ಲಿರುವ ಪಾರೆಸ್ಟ ಸರ್ವೆ ನಂ 72 ರಲ್ಲಿ ಇದ್ದಾಗ ಮಾಹಿತಿ ಬಂದಿರುತ್ತದೆ ಸದ್ರಿ ಮಾಹಿತಿ ನನಗೆ ಎಷ್ಟು ಗಂಟೆಗೆ ಬಂದಿರುತ್ತದೆ ಎಂದು ನಿರ್ದಿಷ್ಟವಾದ ಸಮಯ ನೆನಪಿಲ್ಲ ಆದರೆ ಅದು ಮಧ್ಯಾಹ್ನ ಅಂದಾಜು 12-00 ಗಂಟೆ ಆಗಿರಬಹುದು . ಸದ್ರಿ ಮಾಹಿತಿಯನ್ನು ಮಾಹಿತಿದಾರರು ನಾನು ಅರಣ್ಯ ಸರ್ವೆ ನಂ 72 ರಲ್ಲಿ ಇದ್ದಾಗ ನೇರವಾಗಿ ಬಂದು ಮಾಹಿತಿ ನೀಡಿರುತ್ತಾರೆ . ನನಗೆ ಬಂದ ಮಾಹಿತಿ ಎಂದರೆ 1 ನೆ ಅರೋಪಿಯ ಮನೆಯ ಬಳಿ ಒಂದು ಕಾಡು ಪ್ರಾಣಿ ಕೊಂದಿದ್ದಾರೆ ಎಂದು ಮಾಹಿತಿ ಬಂದಿರುತ್ತದೆ . 1 ನೆ ಅರೋಪಿಯ ಮನೆ ಅದೇ ಎಂದು ಆ ಮನೆಯ ಅರ್ ಟಿ ಸಿ ಅಥವಾ ದಾಖಲಾತಿ ತೆಗೆದು ಕೊಂಡಿರುತ್ತಿರಾ ಎಂದರೆ ನಾನು ತೆಗೆದು ಕೊಂಡಿರುವುದಿಲ್ಲ . ಸದ್ರಿ ದಾಖಲಾತಿ ಇಲ್ಲದೆ ಆ ಮನೆ ಮತ್ತು ಜಾಗ 1 ನೆ ಅರೋಪಿಯದ್ದು ಹೇಳಲು ಸಾಧ್ಯ ಇಲ್ಲ ಎಂದರೆ ಸರಿ .

2. ಸದ್ರಿ ಪಾರೆಸ್ಟ ಸರ್ವೆ ನಂ 72 ದಿಂದ ನಿಮ್ಮ ಕಚೇರಿ ಎಷ್ಟು ದೂರ ವಾಗುತ್ತದೆ ಎಂದರೆ ಅಂದಾಜು 5-6 ಕಿಮೀ ದೂರವಾಗುತ್ತದೆ . ಆ ಸಮಯದಲ್ಲಿ ನ್ಯಾಯಾಲಯದಿಂದ ಶೋಧನಾ ವಾರಂಟ ಪಡೆದು ಕೊಂಡು ಅವರ ಮನೆಯ ಪ್ರವೇಶ ಮಾಡಲು ತೊಂದರೆ ಇತ್ತಾ ಎಂದರೆ ಇಲ್ಲ. ಶೋಧನಾ ವಾರಂಟ ವನ್ನು ನಾನು ನನ್ನ ವಲಯ ಕಚೇರಿಯ ಮೆಲಾಧಿಕಾರಿಯಿಂದ ಪಡೆದು ಕೊಂಡಿರುತ್ತೇನೆ ಸದ್ರಿ ಶೋಧನಾ ವಾರಂಟ ಪಡೆದುಕೊಳ್ಳಲು ನಾನೆ ಖುದ್ದಾಗಿ ನನ್ನ ವಲಯ ಕಚೇರಿಗೆ ಹೋಗಿದ್ದೆ. ನಾನು ನನ್ನ ವಲಯ ಕಚೇರಿಗೆ ಹೋಗುವ ಮೊದಲು ನಾನು ಪೋನ ಮಾಡಿ ನಾನು ಬರುವ ವಿಷಯ ತಿಳಿಸಿದ್ದೆ . ನಾನು ವಲಯ ಕಚೇರಿಗೆ ತಲುಪಿದಾಗ ಸಮಯ ಎಷ್ಟಾಗಿತ್ತು ಎಂದು ನನಗೆ ನೆನಪಿಲ್ಲ. ಶೋಧನಾ ವಾರಂಟ ತಯಾರಿಸಲು ಎಷ್ಟು ಸಮಯವಾಯಿತು ಎಂದು ನನಗೆ ನೆನಪಿಲ್ಲ. ಅರಣ್ಯ ಸರ್ವೆ ನಂಬರ 72 ದಿಂದ ಅಂಕೋಲಾ ಸಹಾಯಕ

ಸಂರಕ್ಷಣಾಧಿಕಾರಿ ಕಚೇರಿ ಅಂದಾಜು 35 ರಿಂದ 40 ಕಿಮೀ ದೂರವಾಗುತ್ತದೆ . ಸದ್ರಿ ಕಚೇರಿಯು ನ್ಯಾಯಾಲಯದ ಆವರಣದಿಂದ 500 ಮೀಟರ ದೂರದಲ್ಲಿ ಇರುತ್ತದೆ ಎಂದರೆ ಇರಬಹುದು . ಶೋಧನಾ ವಾರಂಟ ನನಗೆ ಎಷ್ಟು ಗಂಟೆಗೆ ಸಿಕ್ಕಿತು ಎಂದರೆ ನನಗೆ ಯಾವ ಸಮಯ ನೆನಪಿಲ್ಲ. ನಾನು ಪುನಃ ಹೆಬ್ಬುಳ ಗ್ರಾಮಕ್ಕೆ ಎಷ್ಟು ಗಂಟೆಗೆ ಹೋದೆ ಎಂದು ನೆನಪಿಲ್ಲ. ಸಾಕ್ಷಿ ಪುನಃ ಮುಂದುವರೆದು ನಾನು ಅಂಕೋಲಾ ಕಚೇರಿಗೆ ಬಂದಿಲ್ಲ ನಾನು ವಲಯ ಕಚೇರಿ ಮಾಸ್ತಿಕಟ್ಟಾಗೆ ಬಂದಿರುತ್ತೇನೆ . ನೀವು ಒಮ್ಮೆ ವಲಯ ಕಚೇರಿಗೆ ಇನ್ನೊಮ್ಮೆ ಅಂಕೋಲಾ ಕಚೇರಿಗೆ ಹೋಗಿದ್ದೆ ಎಂದು ಸುಳ್ಳು ಹೇಳುತ್ತಿದ್ದಿರಿ ಎಂದರೆ ನಾನು ಆ ರೀತಿ ಹೇಳಿಲ್ಲ. ನೀವು ಕರ್ತವ್ಯ ನಿರ್ವಹಿಸುತ್ತಿದ್ದಾಗ ಕರ್ತವ್ಯದ ದಿನಚರಿ ಇರುತ್ತದೆ ಎಂದರೆ ಸ ರಿ . ಆ ರೀತಿ ಕರ್ತವ್ಯದ ದಿನಚರಿ ಯನ್ನು ನಿಮ್ಮ ಮೇಲಾಧಿಕಾರಿ ಬಳಿಯಲ್ಲಾಗಲಿ ಅಥವಾ ನ್ಯಾಯಾಲಯದಲ್ಲಿ ಹಾಜರ ಪಡಿಸಿದ್ದೀರಾ ಎಂದರೆ ಅದು ತನಿಖಾಧಿಕಾರಿ ಕರ್ತವ್ಯ ಆಗಿರುತ್ತದೆ . ಪಂಚರಾದ ಚಾಸಾ –3 ಮತ್ತು 4 ರವರನ್ನು ನಾನು ಮತ್ತು ನನ್ನ ಸಿಬ್ಬಂದಿ ಕರೆದು ಕೊಂಡು ಬಂದಿರುತ್ತೇವೆ . ನಾನು ನಮ್ಮ ವಲಯ ಕಚೇರಿಗೆ ನನ್ನ ಇಲಾಖಾ ಬೈಕ ನಲ್ಲಿ ಹೋಗಿರುತ್ತೇನೆ . ಸದ್ರಿ ಆ ದಿನ ನಾನು ವಲಯ ಕಚೇರಿಗೆ ನಾನು ಒಬ್ಬನೆ ಹೋಗಿರುತ್ತೇನೆ . ಆ ಬೈಕ ನಂಬರನ ಮತ್ತು ಯಾವ ಕಂಪನಿಯ ಬೈಕ ಎಂದು ಪಂಚನಾಮೆ ಯಲ್ಲಿ ಕಾಣಿಸಿರುತ್ತೀರಾ ಎಂದರೆ ಅದರ ಅವಶ್ಯಕತೆ ನನಗೆ ಕಂಡು ಬಂದಿಲ್ಲ ಹಾಗಾಗಿ ಕಾಣಿಸಿಲ್ಲ . ಸದ್ರಿ ಪಂಚನಾಮೆಯಲ್ಲಿ ಆ ರೀತಿ ಅವಶ್ಯಕತೆ ಇಲ್ಲ ಎಂದು ಕಂಡು ಬಂದಿಲ್ಲ ಎಂದು ನಾನು ಬರೆಸಿಲ್ಲ.

**3**. ಹೆಬ್ಬುಳ ಎಂಬುದು ತುಂಬಾ ಜನವಸತಿ ಇರುವ ಪ್ರದೇಶ ಅದು ರಾಷ್ಟ್ರಿಯ ಹೆದ್ದಾರಿಯಲ್ಲಿ ಇರುತ್ತದೆ ಮತ್ತು ಸಾಕಷ್ಟು ಟೂರಿಸ್ಟ ಹೊಟೇಲಗಳು ಮತ್ತು ಅಂಗಡಿಗಳು ಇರುವ ಪ್ರದೇಶ ಎಂದರೆ ಸರಿ . ಚಾಸಾ–2 ರವರು ನಿಮಗೆ ಎಲ್ಲಿ ಸಿಕ್ಕಿರುತ್ತಾರೆ ಎಂದರೆ ಅವರು ಹೆಬ್ಬುಳದಲ್ಲಿ ಇದ್ದರು . ನಾನು ಅವರನ್ನು ಹೆಬ್ಬುಳದಲ್ಲಿ ನಿಲ್ಲಿಸಿ ಶೋಧನಾ ವಾರಂಟ ತರಲು ಮಾಸ್ತಿ ಕಟ್ಟಾ ವಲಯ ಕಚೇರಿಗೆ ಹೋಗಿದ್ದೆ . ಅಂಕೋಲಾದಿಂದ ಮಾಸ್ತಿಕಟ್ಟಾ ವಲಯ ಕಚೇರಿಗೆ ಶೋಧನಾ ವಾರಂಟ ಹೇಗೆ ಬಂದಿತು ಎಂದು ನನಗೆ ಗೊತ್ತಿಲ್ಲ . ಚಾಸಾ –3 ಮತ್ತು 4 ರವರು ನಿಮ್ಮ ಇಲಾಖೆಯ ದಿನಗೂಲಿ ನೌಕರರು ಎಂದರೆ ಚಾಸಾ –3 ರವರು ನಮ್ಮ ಇಲಾಖೆಯಲ್ಲಿ ಕ್ಷೇಮಾಭಿವೃದ್ದಿ ನೌಕರ , ಮತ್ತು ಚಾಸಾ –4 ನಮ್ಮ ಇಲಾಖೆ ಗೆ ಸಂಬಧಿಸಿದವನಲ್ಲ . ನಾನು ಮಾಸ್ತಿಕಟ್ಟಾ

ವಲಯ ಕಚೇರಿ ಯಲ್ಲಿ ಹೆಬ್ಬುಳ ಶಾಖೆಯಲ್ಲಿ 4 ವರೆ ವರ್ಷ ದಿಂದ ಕರ್ತವ್ಯ ನಿರ್ವಹಿಸುತ್ತಿದ್ದೇನೆ . ಸಾಧಾರಣವಾಗಿ ನಿಮಗೆ ಹೆಬ್ಬುಳ ದಲ್ಲಿರುವ ಗ್ರಾಮಸ್ಥರ ಪರಿಚಯ ಇರುತ್ತದೆ ಎಂದರೆ ಸರಿ . ಚಾಸಾ-3 ಮತ್ತು 4 ರವರು ನೀವು ದಾಖಲಿಸಿರುವ ಅನೇಕ ಪ್ರಕರಣದಲ್ಲಿ ಪಂಚರಾಗಿ ಸಾಕ್ಷಿದಾರರಾಗಿರುತ್ತಾರೆ ಎಂದರೆ ಚಾಸಾ -4 ರವರು ಹೆಬ್ಬುಳ ಗ್ರಾಮದ ಗ್ರಾಮ ಅರಣ್ಯ ಸಮಿತಿಯ ಸದಸ್ಯರು ಅಗಿರುತ್ತಾರೆ . ಅದರಿಂದ ನಾನು ಅವರನ್ನು ಪಂಚರಾಗಿ ಕರೆಯುತ್ತೇವೆ . ಹಲವಾರು ಪ್ರಕರಣದಲ್ಲಿ ಅವರನ್ನು ಪಂಚರನ್ನಾಗಿ ಕರೆದಿರುತ್ತಿರಿ ಎಂದರೆ ಕೆಲವೊಂದು ಪ್ರಕರಣದಲ್ಲಿ ಪಂಚರಾಗಿ ಕೆರೆದಿರುತ್ತೇವೆ . ಕ್ಷೇಮಭಿವೃದ್ದಿ ಮತ್ತು ಗ್ರಾಮ ಅರಣ್ಯ ಸಮಿತಿ ನಮ್ಮ ಇಲಾಖೆಯ ಅಧಿನದಲ್ಲಿ ಬರುತ್ತದೆ ಎಂದರೆ ಗ್ರಾಮ ಅರಣ್ಯ ಸಮಿತಿ ಅರಣ್ಯ ಇಲಾಖೆ ಮತ್ತು ಸಾರ್ವಜನಿಕರ ಸಹಭಾಗಿತ್ವ ಸಮಿತಿ ಆಗಿರುತ್ತದೆ . ಹೆಬ್ಬುಳ ಗ್ರಾಮದವರು ನಿಮ್ಮ ಪರಿಚಯಸ್ಥರಾದ ಕಾರಣ ಅವರನ್ನು ಪಂಚರನ್ನಾಗಿ ಕರೆದಲ್ಲಿ ಇಲ್ಲ ಎಂದು ಹೇಳುವ ಸಂದರ್ಬ ಬರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ -3 ಮತ್ತು 4 ರವರು ನಿಮ್ಮ ಇಲಾಖೆಯ ದಿನಗೂಲಿ ನೌಕರರು ಆ ಕಾರಣದಿಂದ ಅವರನ್ನು ನೀವು ಸಾಕ್ಷಿದಾರರಾಗಿ ಕರೆಯುವುದು ಎಂದರೆ ಸರಿಯಲ್ಲ . ಹೆಬ್ಬುಳ ಗ್ರಾಮದ ಸಾರ್ವಜನಿಕರನ್ನು ಪಂಚರಾಗಿ ಕರೆದರೆ ನೀವು ಸೃಷ್ಟಿಸಿದ ಪ್ರಕರಣದ ಬಗ್ಗೆ ಅವರಿಗೆ ಗೊತ್ತಾಗುತ್ತದೆ ಎಂಬ ಕಾರಣದಿಂದ ನೀವು ಹೆಬ್ಬುಳ ಗ್ರಾಮದ ಸಾರ್ವಜನಿಕರನ್ನು ಪಂಚರನ್ನಾಗಿ ಕರೆದಿಲ್ಲ ಎಂದರೆ ಸರಿಯಲ್ಲ . ಬೇರೆ ಯಾವುದಾದರೂ ಸಾರ್ವಜನಿಕರನ್ನು ಈ ಪ್ರಕರಣದಲ್ಲಿ ಪಂಚರನ್ನಾಗಿ ಮಾಡುವ ಪ್ರಯತ್ನ ಮಾಡಿರುತ್ತೀರಾ ಎಂದರೆ ಇಲ್ಲ.

**4.** ಪಂಚರನ್ನಾಗಿ ಕರೆಯಲು ಮೊದಲು ಚಾಸಾ -4 ರವರ ಮನೆಗೆ ಹೋಗಿರುತ್ತೇವೆ .ಚಾಸಾ-4 ರವರ ಮನೆಗೆ ಹೋದಾಗ ಎಷ್ಟು ಗಂಟೆ ಆಗಿತ್ತು ಎಂದೆರ ಅಂದಾಜು 2-10 ಗಂಟೆ ಆಗಿರಬಹುದು. ಚಾಸಾ 3 ರವರ ಮನೆಗೆ ಅಂದಾಜು 2-20 ಆಗಿರಬಹುದು. ಇಬ್ಬರು ಪಂಚ ರನ್ನು ಕರೆದು ಕೊಂಡು ಘಟನಾ ಸ್ಥಳಕ್ಕೆ ಹೋದಾಗ 2-25 ರಿಂದ 2-30 ಆಗಿರುತ್ತದೆ . ಆ ದಿನ ನಾವು ಬೈಕನಲ್ಲಿ ಹೋಗಿದ್ದೆವು . ಒಂದೇ ಬೈಕ ನಲ್ಲಿ 4 ಜನ ಹೋದರಾ ಎಂದರೆ ಪಂಚರನ್ನು ಕರೆದು ಕೊಂಡು ನಾವು ನಡೆದು ಕೊಂಡು ಹೋಗಿರುತ್ತೇವೆ . ಬೈಕನ್ನು ಚಾಸಾ-4 ರ ಮನೆ ಬಳಿ ಇಟ್ಟಿರುತ್ತೇವೆ . ನೀವು ಈ ಪ್ರಕರಣದ ಕಡತದಲ್ಲಿ ಮತ್ತು ಪಂಚನಾಮೆಯಲ್ಲಿ ಯಾವುದೇ ಸಮಯ ನಮೂದು ಮಾಡಿದ್ದು ಇಲ್ಲ ಎಂದರೆ ಸರಿ . ಘಟನಾ ಸ್ಥಳಕ್ಕೆ ಹೋದಾಗ ಮೊದಲನೆ

ಆರೋಪಿಯನ್ನು ಅವರ ಮನೆಯಿಂದ ಕರೆದು ಅವರಿಗೆ ಶೋಧನಾ ಸಮುಚಿತ ವರದಿ ತೋರಿಸಿ ಮನೆ ಮತ್ತು ಅವರ ಮನೆಯ ಸುತ್ತಮುತ್ತಲಿನ ಪ್ರದೇಶ ಪರಿಶೀಲನೆ ಮಾಡಿರುತ್ತೇವೆ . ಆ ಸಮಯದಲ್ಲಿ ನಾನು ನನ್ನ ಸಿಬ್ಬಂದಿಗಳು ಪಂಚರು ಮನೆಯ ಒಳಗಡೆ ಹೋಗಿರುತ್ತೇವೆ ಮನೆಯ ಒಳಗಡೆ ಎಷ್ಟು ಕೊಣೆಗಳು ಇರುತವೆ ಎಂದರೆ ನನಗೆ ನೆನಪಿಲ್ಲ. ಮನೆಯ ಒಳಗಡೆ ಹೋದ ಬಗ್ಗೆ ಮತ್ತು ಪರಿಶೀಲನೆ ಮಾಡಿದ ಬಗ್ಗೆ ಪೊಟೊ ತೆಗೆದಿರುತ್ತಿರಾ ಎಂದರೆ ಇಲ್ಲ. ಕಾಡು ಪ್ರಾಣಿಯ ಕುರುಹು ಬಂದಿತ್ತು ಎಂದು ಹೇಳಿರುತ್ತಿರಿ ಮನೆಯ ಒಳಗಡೆ ಆ ಕಾಡುಪ್ರಾಣಿಯ ಮಾಂಸವನ್ನು ಬೇಯಿಸಿದ ಕುರುಹುವಾಗಲಿ , ಮಾಂಸದ ಬಗ್ಗೆ ಯಾವುದೆ ಕುರುಹು ಕಂಡು ಬಂದಿರುತ್ತದೆಯಾ ಎಂದರೆ ಮನೆಯ ಒಳಗಡೆ ಕಂಡು ಬಂದಿಲ್ಲ . ನೀವು, ನಿಮ್ಮ ಸಿಬ್ಬಂದಿ , ಪಂಚರು ಸದ್ರಿ ಮನೆಯ ಒಳಗಡೆ ಹೋಗಿದ್ದರ ಬಗ್ಗೆ ಮತ್ತು ಎಷ್ಟು ಕೊಣೆಗಳು ಇದ್ದವು ಎಂದು ಪಂಚನಾಮೆಯಲ್ಲಿ ಬರೆದಿರುತ್ತಿರಾ ಎಂದರೆ ಪಂಚನಾಮೆ ಯಲ್ಲಿ ಮನೆಯ ಒಳಗಡೆ ಹೊಗಿದ್ದರ ಬಗ್ಗೆ ಬರೆದಿರುತ್ತೆವೆ .ಪಂಚನಾಮೆಯಲ್ಲಿ ಎಲ್ಲಿ ಬರೆದಿರುತ್ತಿರಿ ಎಂದರೆ ಸದ್ರಿ ಯವರ ಮನೆ ಪರಿಶೀಲಿದಾಗ ಎಂದು ಬರೆಯಲಾಗಿರುತ್ತದೆ . ನೀವು ಮನೆಯ ಒಳಗಡೆ ಯಾವುದೆ ಪರಶೀಲನೆಗೆ ಹೊದದ್ದೆ ಇಲ್ಲ ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ ಅದಕ್ಕಾಗಿಯೆ ಅನಾವಶ್ಯಕ ಉತ್ತರ ಕೊಡುತ್ತಿದ್ದೀರಿ ಎಂದರೆ ಸರಿಯಲ್ಲ .

**5.** 1 ನೇ ಅರೋಪಿಗೆ ಸಂಬಂಧಿಸಿದೆ ಎನ್ನಲಾದ ಎಲ್ಲಾ ತೋಟದ ಪರಿಶೀಲನೆ ಮಾಡಿರುತ್ತಿರಾ ಎಂದರೆ ತೋಟ ಪರಿಶೀಲನೆ ಮಾಡಿರುತ್ತೇನೆ ಆದರೆ ದಿಕ್ಕು ನೆನಪಿಲ್ಲ. ತೋಟ ಪರಿಶೀಲನೆ ಮಾಡಿದ ಬಗ್ಗೆ ಪೊಟೊ ತೆಗೆಸಿರುತ್ತೇನೆ . ಅದನ್ನು ಹಾಜರ ಪಡಿಸಿದ ಬಗ್ಗೆ ನನಗೆ ಗೊತ್ತಿಲ್ಲ . ಅದನ್ನು ಸುರೇಶ ಪಡ್ತಿಯವರು ತೆಗೆದಿರುತ್ತಾರೆ . ಹಾಜರ ಪಡಿಸಿದ ಬಗ್ಗೆ ನನಗೆ ಗೊತ್ತಿಲ್ಲ .ಚಾಸಾ-6 ರವರು ಎಲ್ಲಿದ್ದರು ಎಷ್ಟು ಗಂಟೆಗೆ ಸಿಕ್ಕಿದರು ಎಂದರೆ ನಾನು ಹೆಬ್ಬುದದಲ್ಲಿ ಇದ್ದೆ ನಾನು ಅವರನ್ನು ಕಟಿನಹಕಲ್ ದಿಂದ ಪೋನ ಕರೆ ಮಾಡಿ ಕರೆಸಿರುತ್ತೇನೆ . ನಾನು ಅವರನ್ನು ಮಾಸ್ತಿಕಟ್ಟೆಗೆ ಹೋಗುವ ಪೂರ್ವದಲ್ಲಿ ಕರೆಸಿರುತ್ತೇನೆ ಅವರು ಎಷ್ಟು ಗಂಟೆಗೆ ಹೇಗೆ ಬಂದರು ಎಂದುನೆನಪಿಲ್ಲ ಅವರು ಸಿಕ್ಕರು ನಾನು ಅವರನ್ನು ಕರೆದು ಕೊಂಡು ಹೋದೆ . ಪೊಟೊ ತೆಗೆದ ಕ್ಯಾಮೆರಾ ಯಾವುದು ಎಂದು ನೆನಪಿಲ್ಲ.

6. ತೋಟದಲ್ಲಿ ಗುಂಡಿಗಳು ಇದ್ದವು ಎಂದು ಹೇಳಿರುತ್ತಿರಿ ಅವುಗಳು ಎಷ್ಟು ಉದ್ದ ಅಗಲ ಎಷ್ಟು ಆಳದ ಗುಂಡಿಗಳು ಎಂದು ನನಗೆ ನೆನಪಿಲ್ಲ ಅದನ್ನು ಪಂಚನಾಮೆಯಲ್ಲಿ ನಮೂದು ಮಾಡಿಲ್ಲ . ಒಂದು ಗುಂಡಿಯಿಂದ ಇನ್ನೊಂದು ಗುಂಡಿಗೆ ಎಷ್ಟು ಅಂತರ ಇತ್ತು ಎಂದರೆ ಅಂದಾಜು 2 ರಿಂದ 4 ಅಡಿ ದೂರ ಇತ್ತು . ಆ ಗುಂಡಿಗಳ ಪೊಟೊ ತೆಗೆಸಿದ್ದೆ . ನ್ಯಾಯಾಲಯದ ಮುಂದೆ ಹಾಜರ ಪಡಿಸಿದ್ದೀರಾ ಎಂದರೆ ಅದು ತನಿಖಾಧಿಕಾರಿಗೆ ಬಿಟ್ಟದ್ದು . ನ್ಯಾಯಾಲಯದಲ್ಲಿ ನೀವು ಮನೆ ಪ್ರವೇಶಿಸಿದ ಪೊಟೊಗಳು , ಗುಂಡಿ ತೆಗೆಸಿದ ಪೊಟೊ ಗಳು ಯಾವುದಾದರೂ ಇರುತ್ತದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ .ಅವೆಲ್ಲಾ ವಿಷಯಗಳನ್ನು ನೀವು ಸೃಷ್ಟಿಸಿದ್ದು ಅದಕ್ಕಾಗಿ ನೀವು ಸುಳ್ಳು ಹೇಳುತ್ತಿರುವುದು ಎಂದರೆ ಸರಿಯಲ್ಲ .

7. ನಾಯಿಗಳು ಸಾಮಾನ್ಯವಾಗಿ ಯಾವುದೆ ಪ್ರಾಣಿ ಹಿಡಿಯಬೇಕಾದರೆ ತಲೆಯನ್ನು ಹಿಡಿಯುತ್ತವೆ ಎಂದರೆ ನನಗೆ ಗೊತ್ತಿಲ್ಲ . ತಲೆ ಬುರುಡೆ ಗೆ ನಾಯಿ ಕಚ್ಚಿದ ಕುರುಹು ಗಳು ಕಂಡು ಬಂದಿಲ್ಲ . 1 ಮತುತ 2 ನೆ ಅರೋಪಿತರು ಆ ಕಾಡು ಪ್ರಾಣಿ ಕೊಂದ ಬಗ್ಗೆ ಯಾವುದಾದರೂ ಸಲಕರಣೆ ನೀವು ನೋಡಿರುತ್ತಿರಾ ಎಂದರೆ ಘಟನೆ ನಡೆದ ದಿನ ನನಗೆ ಸಿಕ್ಕಿಲ್ಲ . ನಾಯಿ ಹಿಡಿದು ತಂದ ಕಾಡುಪ್ರಾಣಿಯನ್ನು ಸದ್ರಿ ಅರೋಪಿತರು ಕೊಂದರು ಎಂದು ನೀವು ಬಾಯಿ ಮಾತಿನಿಂದ ಹೇಳುತ್ತಿದ್ದಿರಿ ಎಂದು ಅದನ್ನು ಪುರಾವೆ ಗೊಳಿಸಲು ಯಾವುದೆ ಸಾಕ್ಷಾಧಾರ ಇಲ್ಲ ಎಂದರೆ ಘಟನೆ ನಡೆದ ದಿನ ನನಗೆ ಯಾವುದೆ ಸಾಕ್ಷಾಧಾರ ಸಿಕ್ಕಿಲ್ಲ. ಸದ್ರಿ ಕಾಡು ಪ್ರಾಣಿಗೆ ನಾಯಿ ಕಚ್ಚಿದ ಕುರುಹು ಗಳು ನನಗೆ ಆ ದಿನ ಕಂಡುಬಂದಿಲ್ಲ . ನಿಪಿ–3 ಮತ್ತು 4 2 ಪೊಟೊ ಗಳು ವಲಯ ಅರಣ್ಯ ಕಚೇರಿ ಮಾಸ್ತಿಕಟ್ಟಾ ಅವರಣದಲ್ಲಿ ತೆಗೆದ ಪೊಟೊ ವಾಗಿರುತ್ತದೆ . ನೀವು ಘಟನಾ ಸ್ದಳದಲ್ಲಿ ಸದ್ರಿ ನಿಪಿ–3 ಮತ್ತು 4 ರಲ್ಲಿ ಕಾಣಿಸಿದ ಪರಿಕರಗಳನ್ನು ಪಡೆದು ಕೊಂಡಿರುತ್ತಿರಿ ಎಂದು ರುಜುವಾತು ಪಡಿಸಲು ಯಾವುದೆ ಸಾಕ್ಷಾಧಾರ ಇಲ್ಲ ಎಂದರೆ ಸ್ದಳದಲ್ಲಿ ತೆಗೆದ ಪೊಟೊ ಇತ್ತು ಆದರೆ ನ್ಯಾಯಾಲಯದಲ್ಲಿ ಆ ಪೊಟೊ ಯಾವುದು ಕಾಣುತ್ತಿಲ್ಲ. ನಿಪಿ–3 ರಲ್ಲಿ ಪೊಟೊ ದಲ್ಲಿ ಕಾಣುವ ಬುಟ್ಟಿಯಲ್ಲಿ ಕಾಣಿಸುವ ಪರಿಕರದಂತೆ ಆ ಪ್ರಾಣಿ ಯಾವುದು ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ . ಸಾಮಾನ್ಯವಾಗಿ ಹಂದಿಗಳಿಗೆ 4 ಕಾಲುಗಳು ಇರುತ್ತವೆ . 2 ಕಾಲಿನ ಹಂದಿ ಇರಲು ಸಾಧ್ಯ ಇಲ್ಲ . ನಿಪಿ–3 ಮತ್ತು 4 ರ ಪೊಟೆಗಳನ್ನು ಪಂಚನಾಮೆ ಯ ಪೂರ್ವದಲ್ಲಿ ಅಥವಾ ನಂತರದಲ್ಲಿ ಯಾವಾಗ ತೆಗೆದಿರುತ್ತೀರಿ ಎಂದರೆ ಪಂಚನಾಮೆ ಆದ

ನಂತರ ತೆಗೆಯಲಾಗಿರುತ್ತದೆ. ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಮಹಜರ ಕಾಲಕ್ಕೆ ಯಾವುದೆ ಪೊಟೊ ತೆಗೆದದ್ದು ಇಲ್ಲ ಎಂದರೆ ಸರಿಯಲ್ಲ . ನೀವು ಆ ದಿನ ಘಟನಾ ಸ್ಥಳಕ್ಕೆ ಹೋದದ್ದೆ ಇಲ್ಲ ಪಂಚನಾಮೆ ಮಾಡಿದ್ದೆ ಇಲ್ಲ ಎಂದರೆ ಸರಿಯಲ್ಲ .

8 ಅರೋಪಿಯ ಕುಟುಂಬದವರದ್ದು ಅರಣ್ಯ ಅತಿಕ್ರಮಣ ಜಮಿನು ಇರುತ್ತದೆ ಎಂದರೆ ಸರಿ . ಆ ಆರಣ್ಯ ಅತಿಕ್ರಮಣದ ಜಮೀನಿಗೆ ಅರೋಪಿ ಮತ್ತು ಅವರ ಕುಟುಂಬದವರು ಹಾಕಿದ ಬೇಲಿ ಯನ್ನು ನೀವು ಸಾಕಷ್ಟು ಸಲ ಕಿತ್ತಿರುತ್ತೀರಿ ಎಂದರೆ ಸರಿಯಲ್ಲ . ಅವರು ನಿಮ್ಮ ಇಲಾಖೆ ವಿರುದ್ಧ ಹಲವಾರು ವರ್ಷಗಳಿಂದ ಅರಣ್ಯ ಅತಿಕ್ರಮಣದ ಬಗ್ಗೆ ಸಾಕಷ್ಟು ಹೋರಾಟ ಮಾಡಿ ಕೊಂಡು ಬಂದಿರುತ್ತಾರೆ ಎಂದರೆ ನನಗೆ ಕಂಡುಬಂದಿಲ್ಲ . ಅವರ ವಿರುದ್ಧ ದ್ವೇಷದಿಂದ ಇಲಾಖೆಯ ಅಂಕಿಅಂಶಕೊಸ್ಕರ ಸುಳ್ಳು ಹೇಳುತ್ತಾ ಬಂದಿರುತ್ತಿರಿ ಎಂದರೆ ಸರಿಯಲ್ಲ .ಕಾಡುಗಳಲ್ಲಿ ಇರುವ ಹಂದಿಗಳು ಮತ್ತು ಕಾಡು ಪ್ರಾಣಿಗಳು ಸಾಕಷ್ಟು ಸಾಂಕ್ರಾಮಿಕ ರೊಗದಿಂದ ಸಾಯುತ್ತವೆ ಎಂದರೆ ಇರಬಹುದು . ಆ ರೀತಿ ಸತ್ತ ಕಾಡು ಹಂದಿಯ ತಲೆ ಮತು ಹೊಟ್ಟೆಯ ಪರಿಕರ ಉಪಯೊಾಗಿಸಿ ಕೊಂಡು ಅರೋಪಿ ಮೇಲೆ ಸುಳ್ಳು ಪ್ರಕರಣ ಸೃಷ್ಟಿ ಮಾಡಿರುತ್ತಿರಿ ಎಂದರೆ ಸರಿಯಲ್ಲ. ಸ್ಥಳದಲ್ಲಿ ಪೊಟೊ ತೆಗೆದರೆ ನೈಜತೆ ಗೊತ್ತಾಗುತ್ತದೆ ಎಂದು ಸ್ಥಳದಲ್ಲಿ ಪೊಟೊ ತೆಗೆಯಲಿಲ್ಲ ಎಂದರೆ ಸರಿಯಲ್ಲ .ಹಾಗಾಗಿ ನೀವು ಸದ್ರಿ ಕಚೇರಿಯಲ್ಲಿ ತಂದ ಪರಿಕರಗಳನ್ನು ದೂರುಪಯೊಾಗ ಪಡಿಸಿಕೊಂಡು ಅರೋಪಿ ಮೇಲೆ ಸುಳ್ಳು ಪ್ರಕರಣ ಹಾಕಿರುತ್ತೀರಿ ಎಂದರೆ ಸರಿಯಲ್ಲ. ಅರೋಪಿತರು ಮತ್ತು ನಿಮ್ಮ ಇಲಾಖೆಯ ಸಂಬಂದ ಚೆನ್ನಾಗಿ ಇಲ್ಲದ ಕಾರಣ ಸದ್ರಿ ಪರಿಕರಣ ಸೃಷ್ಟಿಸಿ ಮಹಜರ ಪೂರಕವಾಗಿ ಸೃಷ್ಟಿಸಿ ಸುಳ್ಳು ಪ್ರಕರಣ ಸೃಷ್ಟಿ ಮಾಡಿರುತ್ತಿರಿ ಎಂದರೆ ಸರಿಯಲ್ಲ ಪೊಟೊದಲ್ಲಿರುವ ಪರಿಕರಗಳಿಗೂ , ಜಪ್ತು ಪಡಿಸಿರುವ ಪರಿಕರಗಳಿಗೂ ಮತ್ತು ಅರೋಪಿತರಿಗೂ ಯಾವುದೆ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಸದ್ರಿ ಪ್ರಕರಣ ಸೃಷ್ಟಿ ಮಾಡಬೆಕೆಂಬ ಉದ್ದೇಶದಿಂದ ನಿಮ್ಮ ಇಲಾಖೆಯ ದಿನಗೂಲಿ ನೌಕರರನ್ನು ಸಾಕ್ಷಿದಾರರನ್ನಾಗಿ ಮಾಡಿರುತ್ತಿರಿ ಎಂದರೆ ಸರಿಯಲ್ಲ . ನೀವು ಆ ದಿನ ಕರ್ತವ್ಯ ದಲ್ಲಿ ಇದ್ದದ್ದು ಇಲ್ಲ ಎಂದರೆ ಸರಿಯಲ್ಲ . ಆ ದಿನ ಘಟನಾ ಸ್ಥಳಕ್ಕೆ ನೀವು ಮತ್ತು ಚಾಸಾ 2 ರಿಂದ 6 ರವರು ಹೊದದ್ದು ಇಲ್ಲ ಎಂದರೆ ಸರಿಯಲ್ಲ . ನೀವು 2-30 ರಿಂದ 3-30 ರವರೆಗೆ ಘಟನಾ ಸ್ಥಳದಲ್ಲಿ ಪಂಚನಾಮೆ ಬರೆದಿರುತ್ತಿರಿ ಎಂದು ಸುಳ್ಳು ಹೆಳುತ್ತಿದ್ದಿರಿ ಎಂದರೆ ಸರಿಯಲ್ಲ . ಈ

ಪ್ರಕರಣವನ್ನು ನೀವು ಮತು ನಿಮ್ಮ ಇಲಾಖೆಯವರು ಮಹಜರವನ್ನು ಇಲಾಖೆಯಲಿ ಸೃಷ್ಟಿ ಮಾಡಿರುತ್ತಿರಿ ಎಂದರೆ ಸರಿಯಲ್ಲ . ಅದಕ್ಕಾಗಿ ಘಟನಾ ಸ್ಥಳದ ಯಾವುದೆ ನೈಜ ದಾಖಲಾತಿಗಳು ನ್ಯಾಯಾಲಯದ ಮುಂದೆ ಇಲ್ಲ ಎಂದರೆ ಸರಿಯಲ್ಲ . ಮುಖ್ಯ ವಿಚಾರಣೆಯಲ್ಲಿ ಎಲ್ಲಾ ವಿಚಾರಣೆಗಳು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ ನಿಪಿ–7 ಮತ್ತು 8 ಪೊಟೊದಲ್ಲಿ ಸದ್ರಿ ಹಂದಿಯನ್ನು ಸ್ಥಳದಲ್ಲಿ ಸುಟ್ಟ ಬಗ್ಗೆ ಯಾವುದೆ ಕುರುಹು ಕಾಣುತ್ತಿಲ್ಲ ಕೇವಲ ಬೆಂಕಿ ಹಾಕಿದ ಬಗ್ಗೆ ಮಾತ್ರ ಕಾಣುತ್ತಿದೆ ಎಂದರೆ ಸದ್ರಿ ಪರಿಕರಗಳನ್ನು ಸುಡಲು ಇಟ್ಟದ್ದು ನಿಜ ಆದರೆ ರಾತ್ರಿಯಾಗಿದ್ದರಿಂದ ಪೊಟೊದಲ್ಲಿ clear ಕಾಣುತ್ತಿಲ್ಲ ಆ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂರೆ ಸರಿಯಲ್ಲ . ಆ ರೀತಿ ನಾನು ಯಾವುದೆ ಪಂಚನಾಮೆ ಮಾಡಿದ್ದು ಇಲ್ಲ ಎಂದರೆ ಸರಿಯಲ್ಲ . ಪ್ರಕರಣಕ್ಕೆ ಅನೂಕೂಲವಾಗುವಂತೆ ಸದ್ರಿ ನಿಪಿ–7 ಮತ್ತು 8 ರ ಪೊಟೊ ಸೃಷ್ಟಿ ಮಾಡಿ ಕೊಂಡದ್ದು ಎಂದರೆ ಸರಿಯಲ್ಲ .

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅಂಕೋಲಾ.